## ಕಿವಿಯೋಲೆ ಆಯ್ಕೆ ಹೀಗಿರಲಿ...

- ನಿಮ್ಮ ಮುಖಕ್ಕೆ ತಕ್ಕಂತೆ ಕಿವಿಯೋಲೆ ಧರಿಸಿ.
- ನಿಮ್ಮ ಮುಖ ಅಗಲವಾಗಿದ್ದರೆ ಚಿಕ್ಕದಾದ ಓಲೆ ಹಾಕಿಕೊಳ್ಳಬೇಡಿ ಇದು ಮುಖಕ್ಕೆ ಲುಕ್ ಕೊಡುವುದಿಲ್ಲ. ಹಾಗಾಗಿ ಅಗಲವಾದ ಓಲೆ ಧರಿಸಿ. ಇನ್ನು ಚಿಕ್ಕ ಮುಖದವರು ಪುಟ್ಟದಾದ ಓಲೆ ಧರಿಸಿದರೆ ಚೆನ್ನಾಗಿ ಕಾಣುತ್ತಾರೆ.
- ಉದ್ದ ಮುಖದವರು ಮೊಟ್ಟೆಯಾಕಾರದ ಓಲೆ ಧರಿಸಿದರೆ ಸುಂದರವಾಗಿ ಕಾಣುತ್ತಾರೆ. ಕೂದಲು ಉದ್ದ ಇರುವವರು ಹ್ಯಾಂಗಿಂಗ್ಸ್ ಹಾಕಿಕೊಂಡರೆ ಚೆನ್ನಾಗಿ ಕಾಣಿಸುತ್ತಾರೆ.
- ಇತರೇ ಲೋಹದ ಕಿವಿಯೋಲೆಗಳನ್ನು ಪರೀಕ್ಷಿಸಿಕೊಳ್ಳಿ. ಒರಟಾಗಿದ್ದಲ್ಲಿ, ಚರ್ಮಕ್ಕೆ ಹಾನಿಯುಂಟಾಗಬಹುದು.
- ಸ್ನಾನಕ್ಕೂ ಮುನ್ನ ಕಿವಿಯೋಲೆ ತೆಗೆದಿಡಿ. ಇದರಿಂದ ಬಣ್ಣಗೆಡುವುದು ತಪ್ಪುತ್ತದೆ.
- ಕೆಲವು ಕಿವಿಯೋಲೆ ಬಹಳ ಭಾರವಾಗಿರುತ್ತವೆ. ಅವುಗಳನ್ನು ಧರಿಸದಿದ್ದರೆ ಉತ್ತಮ. ಕಿವಿ ಹರಿದು ಹೋಗುವ ಸಾಧ್ಯತೆಗಳಿರುತ್ತದೆ.
- ರಾತ್ರಿ ವೇಳೆ ಕಿವಿಯೋಲೆಯನ್ನು ಧರಿಸಿ ಮಲಗಬೇಡಿ. ಹಾಳಾಗಬಹುದು, ಇಲ್ಲವೇ ಗಾಯವಾಗಬಹುದು.















ಇವೆಲ್ಲದರ ಮಧ್ಯೆ ಈ ಇಟಾಲಿಯನ್ ಹೂಪ್ಸ್ ಎಂಬ ಕಿವಿಯೋಲೆ ಕೂಡ ಹೆಣ್ಣುಮಕ್ಕಳ ಅಚ್ಚುಮೆಚ್ಚಿನ ಆಯ್ಕೆಗಳಲ್ಲಿ ಒಂದಾಗಿ ಜಾಗ ಪಡೆದಿದೆ.

ಹೂಪ್ಸ್‌ಗಳಲ್ಲಿ ಹಲವು ವಿನ್ಯಾಸಗಳಿವೆ, ಉಂಗುರವನ್ನು ಹೋಲುವ ಕಿವಿಯೋಲೆಯಿಂದ ಆರಂಭಿಸಿ ಬಳೆಯಷ್ಟು ದೊಡ್ಡ ಪ್ಲೈನ್ ರಿಂಗ್ ಗಳು ಮಾರುಕಟ್ಟೆಯಲ್ಲಿವೆ. ಅಧುನಿಕ ವಸ್ತ್ರ ವಿನ್ಯಾಸದಿಂದ ಅರಂಭಿಸಿ ಸಾಂಪ್ರದಾಯಿಕ ಉಡುಗೆ ತೊಡುಗೆಗೂ ಹೊಂದಿಕೆಯಾಗುವ ವಿನ್ಯಾಸಗಳು ಸಿಗುತ್ತವೆ. ಮಳಿಗೆಗಳಲ್ಲಿ ಹೂಪ್ಸ್‌ಗಳ ಪ್ರತ್ಯೇಕ ವಿಭಾಗಗಳಿವೆ. ಆನ್‌ಲೈನ್, ವೆಬ್ ಸೈಟ್ ಗಳಲ್ಲೂ ಹೂಪ್ಸ್‌ನ ಆತ್ಯುತ್ತಮ ಸಂಗ್ರಹವಿದೆ. ದುಬಾರಿ ಮೌಲ್ಯದ ಹೂಪ್ ಗಳೂ ಇದ್ದು ಬಂಗಾರದ, ಬೆಳ್ಳಿಯ ಬಣ್ಣಗಳಲ್ಲೂ ಇದು ಲಭ್ಯವಿದೆ. ಮ್ಯಾಚಿಂಗ್ ಯೋಚನೆಯಿಲ್ಲದೆ ಎಲ್ಲಾ ವಿಧದ ಉಡುಪುಗಳಿಗೂ ಹೊಂದಿಕೆಯಾಗುವುದು ಇಟಾಲಿಯನ್ ಹೂಪ್ಸ್‌ನ ವೈಶಿಷ್ಟ್ಯ.

ನೋಡುವುದಕ್ಕೆ ರಿಂಗ್ ತರ ಇರುವ ಕಿವಿಯೋಲೆ ನಾನಾ ವಿನ್ಯಾಸಗಳಲ್ಲಿ ಲಭ್ಯವಿದೆ. ಜತೆಗೆ ಫ್ಯಾಷನ್ ಔಟ್‌ಫಿಟ್‌ನಿಂದ ಹಿಡಿದು ಸಾಂಪ್ರದಾಯಿಕ ದಿರಿಸಿಗೂ ಇದು ಸೈ ಎನಿಸಿಕೊಂಡಿದೆ. ಮೊದಲೆಲ್ಲಾ ಹೆಣ್ಣುಮಕ್ಕಳು ಚಿಕ್ಕದಾದ ಚಿನ್ನದ ರಿಂಗ್ ಧರಿಸುತ್ತಿದ್ದರು. ಅದರ ಕೆಳಭಾಗದಲ್ಲಿ ಮುತ್ತು, ಹವಳ ಇಲ್ಲವೇ ಚಿನ್ನದ ಚಿಕ್ಕ ಗುಂಡು ಮಣಿಯೊಂದು ನೇತಾಡುತ್ತಿತ್ತು. ನಂತರ ಅದರ ಸ್ವರೂಪ ಬದಲಾಗುತ್ತಾ ಹೋಯಿತು. ಈಗ ಅದು ಮತ್ತಷ್ಟೂ ಹೊಸ ರೂಪ ಪಡೆದುಕೊಂಡು ಹೆಂಗಳೆಯರ ಕಿವಿಯಲ್ಲಿ ಮತ್ತೆ ಸ್ಥಾನ ಗಿಟ್ಟಿಸಿಕೊಂಡಿದೆ.

ಹಳೆಕಾಲದಿಂದಲೂ ಖ್ಯಾತಿಯಾಗಿರುವ ಈ ಕಿವಿಯೋಲೆ ಈಗ ಲೇಟೆಸ್ಟ್ ಟ್ರೆಂಡ್. ಸಿನಿಮಾ ತಾರೆಯರಿಂದ ಹಿಡಿದು ಪ್ರತಿಯೊಬ್ಬರೂ ಹೆಚ್ಚಾಗಿ ಬಳಸೋ ಲೇಟೆಸ್ಟ್ ಫ್ಯಾಷನ್ ಇಯರ್‌ರಿಂಗ್. ಟ್ರೆಡಿಷನಲ್ ಲುಕ್ ಕೊಡುವ ಈ ಇಟಾಲಿಯನ್ ಹೂಪ್ ಹುಡುಗಿಯರ ಅಚ್ಚುಮೆಚ್ಚು. ನೋಡಲು ಸರಳವಾಗಿದ್ದರೂ ಅತ್ಯಂತ ಆಕರ್ಷಕ ಮತ್ತು ಸೌಂದರ್ಯ ಹೆಚ್ಚಿಸುವ ಕಿವಿಯೋಲೆ. ಡಬಲ್ ಡ್ಯಾಗರ್ ಹೂಪ್, ಹಾಫ್ ಹೂಪ್ ಹೀಗೆ ವಿವಿಧ ವಿನ್ಯಾಸ, ಕಲರ್‌ಫುಲ್ ಆಗಿರುತ್ತವೆ.

ಕಿವಿಯೋಲೆ ಅತಿ ಹೆಚ್ಚು ವೆರೈಟಿಗಳ ಪ್ರಯೋಗಕ್ಕೆ ಇಯರ್ ರಿಂಗ್ಸ್ ಅವಕಾಶ ನೀಡುತ್ತದೆ. ಹ್ಯಾಂಗಿಂಗ್‌ನ ತುದಿಯಲ್ಲಿ ಚೌಕ, ಆಯತಾಕಾರಗಳ ಆಕೃತಿಯನ್ನು ಬಳಸಿಯೂ ಹೊಸ ಲುಕ್ ಕೊಡಬಹುದು. ಮಿಕ್ಸ್ ಮ್ಯಾಚ್ ಉಡುಪು ಧರಿಸುವಾಗ ಇಂತಹ ಕಿವಿಯೋಲೆಗಳು ಟ್ರೆಂಡಿ ಆಗಿ ಕಾಣಿಸುತ್ತವೆ. ಲೈಟ್ ಆಗಿ ಹರಳು ಅಥವಾ ಸ್ಟೋನ್ಸ್ ಬಳಸಿ ಡಿಸೈನ್ ಮಾಡಿದರೆ ಇನ್ನೂ ಚಂದ.